ತುಮಕೂರು ಡೈರಿಯ ಹಾಲಿನ ಪ್ರಮಾಣ

3616 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಡೈರಿಯು ಪ್ರತಿದಿನ ತುಮಕೂರು ಮತ್ತು ಬೆಂಗಳೂರಿಗೆ ಸರಬರಾಜು ಮಾಡುತ್ತಿರುವ ಒಟ್ಟು ಹಾಲಿನ ಪ್ರಮಾಣವೆಷ್ಟು?

ಆ) ಬೆಂಗಳೂರಿಗೆ ಸರಬರಾಜು ಮಾಡುತ್ತಿರುವ ಹಾಲಿಗೆ ದೊಡ್ಡ ಪ್ರಮಾಣದಲ್ಲಿ ಕಲಬೆರಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ?

ಇ) ತುಮಾಕೂರಿನ ಬೆಂಗಳೂರಿಗೆ ಹಾಲು ಸಾಗಾಣಿಕೆ ಮಾಡುವಾಗ ಕಲಬೆರಿಕೆ ಮಾಡುತ್ತಿರುವುದು ನಿಜವೇ?

ಈ) ಹಾಗಿದ್ದಲ್ಲಿ, ತಮಕೂರು ಡೇರಿಯಿಂದ ಸರಬರಾಜುತ್ತಿರುವ ಹಾಲಿನ ಕಲಬೆರಕೆಯನ್ನು ನಿಲ್ಲಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯಸೇವಾ ರಾಜ್ಯ ಸಚಿವರು)

ಅ) ತುಮಾಕೂರು - 17,000 ಲೀಟರ್
ಬೆಂಗಳೂರು - 18,000 ಲೀಟರ್

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಗಾಣಗಾಪುರದ ಶ್ರೀ ದತ್ತಾತ್ರೇಯ ದೇವಸ್ಥಾನದ ಆದಾಯ

3670 - ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

ಅ) ಗಾಣಗಾಪುರದ ಶ್ರೀ ದತ್ತಾತ್ರೇಯ ದೇವಸ್ಥಾನ 1982, 1983, 1984 1985,1986,ಮತ್ತು 1987,ಮತ್ತು 1988 ಮತ್ತು 1990 ಹಾಗೂ 1991ನೇ ವರ್ಷಗಳ ಆದಾಯ

ಆ) ಆದಾಯದಲ್ಲಿ ಏರಿಕೆ ಮತ್ತು ಇಳಿತಕ್ಕೆ ಕಾರಣಗಳು (ವರ್ಷವಾರು ಸಂಖ್ಯೆಯನ್ನು ಒದಗಿಸುವುದು)

ಇ) ಈ ಮೇಲಿನ ವರ್ಷಗಳಲ್ಲಿ ಸಿಬ್ಬಂದಿಗಳಿಗೆ ಸಂಬಳ ಮತ್ತು ಇತರ ಭತ್ಯೆಗಳಿಗೆ ಆದ ಖರ್ಚು

ಈ) ಗಾಣಗಾಪುರ ದೇವಸ್ಥಾನ ಹೊರತು ರಾಜ್ಯದಲ್ಲಿ ಇನ್ನಾವ ದೇವಸ್ಥಾನಗಳಲ್ಲಿ ಸರ್ಕಾರಿ ವೇತನ ಶ್ರೇಣಿ ಕೊಡದಿರುವುದು ನಿಜವೇ

ಉ) ಹಾಗಿದ್ದರೆ, ಈ ವೇತನ ಶ್ರೇಣಿಯನ್ನು ಯಾರು ಅನುಮೋದಿಸುತ್ತಾರೆ?

ಊ) ಇದು ಸರ್ಕಾರದ ಗಮನಕ್ಕೆ ಬಂದಿದಲ್ಲಿ ಸರ್ಕಾರದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ರಾಜ ಅಮರೇಶ್ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):

ಶ್ರೀ ದತ್ತಾತ್ರೇಯ ಸ್ವಾಮಿ ದೇವಸ್ಥಾನ, ಗಾಣಗಾಪುರ ಇದರ ಆದಾಯವು ಈ ಕೆಳಕಂಡಂತೆ ಇರುತ್ತದೆ.

ವರ್ಷ	ಆದಾಯ